# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# BRUHAT BENGALURU MAHANAGARA PALIKE

Budget Speech

## ಆಯವ್ಯಯ / BUDGET

## 2015 - 2016

**ದಿನಾಂಕ: 17-3-2015**

**ಮಂಡನೆ:**


**ವಿ.ಆನಂದ್**

ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

## 2014-15ನೇ ಸಾಲಿನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ

| | | | |
|---|---|---|---|
| 1. | ಶ್ರೀ ವಿ.ಆನಂದ್ | - | ಅಧ್ಯಕ್ಷರು |
| 2. | ಶ್ರೀ ಕೆ.ಚಂದ್ರಶೇಖರ್ | - | ಸದಸ್ಯರು |
| 3. | ಶ್ರೀ ಎನ್.ನಾಗರಾಜು | - | ಸದಸ್ಯರು |
| 4. | ಶ್ರೀ ಜಿ.ಮಂಜುನಾಥರಾಜು | - | ಸದಸ್ಯರು |
| 5. | ಶ್ರೀ ಸಿದ್ಧಲಿಂಗಯ್ಯ | - | ಸದಸ್ಯರು |
| 6. | ಶ್ರೀ ಎಂ.ಮುನಿರಾಜು | - | ಸದಸ್ಯರು |
| 7. | ಶ್ರೀ ಜಿ.ಮಂಜುನಾಥ | - | ಸದಸ್ಯರು |
| 8. | ಶ್ರೀಮತಿ ಜ್ಯೋತಿಶ್ರೀ ಹರಿರೆಡ್ಡಿ | - | ಸದಸ್ಯರು |
| 9. | ಶ್ರೀಮತಿ ಗಂಗಾಂಬಿಕೆ | - | ಸದಸ್ಯರು |
| 10. | ಶ್ರೀ ಎಸ್.ಕೇಶವಮೂರ್ತಿ | - | ಸದಸ್ಯರು |
| 11. | ಶ್ರೀ ಎಂ.ಬಿ.ಗೋವಿಂದೇಗೌಡ | - | ಸದಸ್ಯರು |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# 2015-16ನೇ ಸಾಲಿನ ಆಯವ್ಯಯ ಮಂಡನೆ

## ವಿ.ಆನಂದ್

### ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ

*****

**ಕೆಂಪೇಗೌಡ ಪೌರ ಸಭಾಂಗಣದಲ್ಲಿ ಉಪಸ್ಥಿತರಿರುವ ಎಲ್ಲರನ್ನು ಸ್ವಾಗತಿಸುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015-16ನೇ ಸಾಲಿನ ಆಯವ್ಯಯವನ್ನು ಮಂಡಿಸುತ್ತಿದ್ದೇನೆ.**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಮ್ಮ ಚುನಾಯಿತ ಅವಧಿಯು ಅಂತಿಮ ಘಟ್ಟದಲ್ಲಿದ್ದು, 2015-16ನೇ ಸಾಲಿನ ಆಯವ್ಯಯವನ್ನು ಮಂಡಿಸುತ್ತಿರುವ ಈ ಸಂದರ್ಭದಲ್ಲಿ ಬೆಂಗಳೂರು ನಗರವು ಬೆಳೆದು ಬಂದ ಹಿನ್ನೆಲೆಯನ್ನು ಸ್ಮರಿಸುವುದು ಸೂಕ್ತವೆಂದು ಭಾವಿಸಿದ್ದೇನೆ.

ಬೆಂಗಳೂರು ನಗರದ ಇತಿಹಾಸವು ಕ್ರಿ.ಶ. 1537ನೇ ವರ್ಷಗಳಷ್ಟು ಪುರಾತನವಾದದ್ದು. ಇದರ ಪ್ರಾರಂಭವು ನಗರದ ನಾಲ್ಕು ದಿಕ್ಕುಗಳಲ್ಲಿ ಮಣ್ಣಿನ ಗೋಪುರಗಳನ್ನು ನಿರ್ಮಿಸುವುದರೊಂದಿಗೆ ಪ್ರಾರಂಭವಾಗಿದ್ದು, ಇದರ ಬೆಳವಣಿಗೆ ಮತ್ತು ಅಭಿವೃದ್ಧಿ ಇಂದಿನವರೆಗೆ ಯಾವುದೇ ವಿರಾಮವನ್ನು ಕಂಡಿರುವುದಿಲ್ಲ. ಈಗ ನಗರವು ಬೃಹದಾಕಾರವಾಗಿ ಬೆಳೆದಿದ್ದು ಸುಮಾರು 800 ಚ.ಕಿ.ಮೀ.ಗೂ ಹೆಚ್ಚಿನ ವಿಸ್ತೀರ್ಣವನ್ನು ಹೊಂದಿದ್ದು, ಸುಮಾರು ಒಂದು ಕೋಟಿಗೂ ಹೆಚ್ಚು ಜನ ವಾಸಿಸುತ್ತಿದ್ದಾರೆ. ನಮ್ಮ ನಗರವು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ನಗರವೆಂದು ಗುರುತಿಸಲ್ಪಟ್ಟಿದೆ. ಪ್ರಮುಖವಾಗಿ ಐ.ಟಿ-ಬಿ.ಟಿ ನಗರ, ಸಿಲಿಕಾನ್ ನಗರ, ಉದ್ಯಾನ ನಗರ, ಕೈಗಾರಿಕಾ ನಗರ ಹಾಗೂ ಇನ್ನೂ ಅನೇಕ ರೀತಿಯ ಹೆಸರುಗಳು ಸೇರ್ಪಡೆಗೊಂಡಿರುತ್ತವೆ. ಈ ನಗರವು ಪ್ರಪಂಚದ ಅನೇಕ ತಾಂತ್ರಿಕ ಅಭಿವೃದ್ಧಿಗಳನ್ನು ಅನುಸರಿಸಿದ್ದರೂ ಸಹ ತನ್ನ ಮೂಲ ಸಾಂಸ್ಕೃತಿಕ ವೈಭವವನ್ನು ಉಳಿಸಿಕೊಂಡಿದೆ.

ಬೆಂಗಳೂರು ನಗರದ ಆಡಳಿತ ವ್ಯಾಪ್ತಿಯು ಹಿಂದೆ 225 ಚ.ಕಿ.ಮೀ ಇದ್ದು, 2007 ರಲ್ಲಿ ಬೆಂಗಳೂರು ಸುತ್ತ ಮುತ್ತ ಇದ್ದ 7 ನಗರಸಭೆ 1 ಪುರಸಭೆ ಮತ್ತು 110 ಗ್ರಾಮಗಳ ವಿಲೀನದೊಂದಿಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಚಿಸಿದ ನಂತರ 198 ವಾರ್ಡ್‌ಗಳೊಂದಿಗೆ ಸುಮಾರು 800 ಚ.ಕಿ.ಮೀಗೂ ಹೆಚ್ಚಾಗಿ ಆಡಳಿತ ವ್ಯಾಪ್ತಿಗೆ ವಿಸ್ತಾರಗೊಂಡಿರುತ್ತದೆ.

ಇಷ್ಟೊಂದು ಬೃಹದಾಕಾರವಾಗಿ ಬೆಳೆಯುತ್ತಿರುವ ಈ ನಗರಕ್ಕೆ ಅತಿ ಅವಶ್ಯಕ ಮೂಲಭೂತ ಸೌಕರ್ಯ ಒದಗಿಸುವಲ್ಲಿ ಪಾಲಿಕೆಯು ಕೆಲವೊಂದು ಆಡಳಿತಾತ್ಮಕ ಹಾಗೂ ಆರ್ಥಿಕ ಸವಾಲುಗಳನ್ನು ಎದುರಿಸುವ ಒತ್ತಡದಲ್ಲಿದೆ. ಈ ಸವಾಲುಗಳನ್ನು ದಕ್ಷ, ಮಿತವ್ಯಯ

ಮತ್ತು ನೂತನ ಆವಿಷ್ಕಾರದ ಮೂಲಕ ಎದುರಿಸಬೇಕಾಗಿದ್ದು, ಪಾಲಿಕೆಯ ಸ್ವಂತ ಆದಾಯವನ್ನು ಹೆಚ್ಚಿಸುವುದು ಹಾಗೂ ಆರ್ಥಿಕ ಸಂಕಷ್ಟಕ್ಕೆ ಸರ್ಕಾರದ ಆರ್ಥಿಕ ಸಹಕಾರ ಹಾಗೂ ಶ್ರೀರಕ್ಷೆ ಅತ್ಯಗತ್ಯವಿರುತ್ತದೆ.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಆರ್ಥಿಕ ನಿರ್ವಹಣೆಯು ಅತಿ ಮುಖ್ಯವಾಗಿದ್ದು, ಇದಕ್ಕೆ ಪೂರಕ ಬೆಂಬಲ ನೀಡುತ್ತಿರುವ **ಪೂಜ್ಯ ಮಹಾಪೌರರೆ, ಮಾನ್ಯ ಉಪ ಮಹಾಪೌರೆ**, ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳಾದ ಸನ್ಮಾನ್ಯ **ಶ್ರೀ ಸಿದ್ಧರಾಮಯ್ಯರವರೆ,** ಹಾಗೂ ಸಾರಿಗೆ ಮತ್ತು ಬೆಂಗಳೂರು ನಗರದ ಜಿಲ್ಲಾ ಉಸ್ತುವಾರಿ ಸಚಿವರಾದ **ಶ್ರೀ ರಾಮಲಿಂಗಾರೆಡ್ಡಿ**ರವರೇ, ಬೆಂಗಳೂರು ನಗರದ **ಮಾನ್ಯ ಸಚಿವರುಗಳೆ,** ನಮಗೆಲ್ಲರಿಗೂ ನೈತಿಕ ಬೆಂಬಲ ನೀಡಿ ಪ್ರೋತ್ಸಾಹಿಸುತ್ತಿರುವ **ಮಾನ್ಯ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳೆ,** ಬೆಂಗಳೂರು ಮಹಾನಗರದ **ಮಾನ್ಯ ಶಾಸಕರುಗಳೆ, ವಿಧಾನಪರಿಷತ್ತಿನ ಸದಸ್ಯರುಗಳೇ,** ಆಡಳಿತ ಪಕ್ಷದ ನಾಯಕರೆ, ವಿರೋಧ ಪಕ್ಷದ ನಾಯಕರೆ, ಜೆ.ಡಿ.ಎಸ್ ಪಕ್ಷದ ನಾಯಕರೆ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳೆ ಮತ್ತು ಪಾಲಿಕೆಯ ಎಲ್ಲಾ ಆತ್ಮೀಯ ಸದಸ್ಯ ಮಿತ್ರರೇ **ಹಾಗೂ.**

ಈ ಆಯವ್ಯಯ ಸಿದ್ಧಪಡಿಸುವಿಕೆಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದ ಕೇಂದ್ರ ಸಚಿವರುಗಳಾದ ಮಾನ್ಯ **ಶ್ರೀ ಅನಂತ್‌ಕುಮಾರ್** ಮತ್ತು **ಶ್ರೀ ಸದಾನಂದಗೌಡ** ರವರು, **ಶ್ರೀ ವೆಂಕಯ್ಯ ನಾಯ್ಡು** ರವರು, ಸಂಸತ್ ಸದಸ್ಯರಾದ **ಶ್ರೀ ಪಿ.ಸಿ.ಮೋಹನ್** ರವರಿಗೂ ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಹಾಲಿ ಶಾಸಕರಾದ **ಶ್ರೀ ಆರ್.ಅಶೋಕ್** ರವರಿಗೂ ಹಾಗೂ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಾನ್ಯ **ಶ್ರೀ ಬಿ.ಎನ್.ವಿಜಯಕುಮಾರ್** ಮತ್ತು ಹೆಬ್ಬಾಳ ವಿಧಾನಸಭಾ ಕ್ಷೇತ್ರ ಶಾಸಕರಾದ ಮಾನ್ಯ **ಶ್ರೀ ಜಗದೀಶ್ ಕುಮಾರ್** ರವರನ್ನು ಹಾಗೂ ಸಹಕರಿಸಿದ ಎಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸಲು ಇಚ್ಛಿಸುತ್ತೇನೆ.

ಬೆಂಗಳೂರು ನಗರವನ್ನು ಕಸಮುಕ್ತ ನಗರವನ್ನಾಗಿಸಲು ಹಾಗೂ ಸ್ವಚ್ಛವಾಗಿಸಲು ಸಹಕರಿಸುತ್ತಿರುವ ಎಲ್ಲರನ್ನೂ ಈ ಸಂದರ್ಭದಲ್ಲಿ ನಾನು ಅಭಿನಂದಿಸಲು ಇಚ್ಛಿಸುತ್ತೇನೆ.

2015-16ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಪಾಲಿಕೆಯ ಆರ್ಥಿಕ ಸಂಕಷ್ಟಕ್ಕೆ ಸ್ಪಂದಿಸಿ ಆರ್ಥಿಕ ನೆರವನ್ನು ಘೋಷಿಸಿರುವುದಕ್ಕೆ ವೈಯಕ್ತಿಕವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೂ ಹಾಗೂ ಬೆಂಗಳೂರು ನಗರ ಉಸ್ತುವಾರಿ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.

ಮಾನ್ಯ ಪಾಲಿಕೆಯ **ಆಯುಕ್ತರೆ,** ವಿಶೇಷ ಆಯುಕ್ತರೆ ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರವರೆ, ಪಾಲಿಕೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರೇ ಮತ್ತು ಈ ಆಯವ್ಯಯ ಸಭೆಗೆ ಆಗಮಿಸಿರುವ ಮಾಧ್ಯಮದ ಎಲ್ಲಾ ಪ್ರತಿನಿಧಿಗಳೇ ಹಾಗೂ ಈ ನಗರದ ಸಜ್ಜನ ನಾಗರಿಕ ಬಂಧುಗಳೇ,

2015-16ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವನ್ನು ವಾಸ್ತವಿಕ ಆದಾಯ ಹಾಗೂ ವರಮಾನಗಳನ್ನು ಗಮನದಲ್ಲಿಟ್ಟುಕೊಂಡು

ನಿರ್ವಹಣೆ ಕಾಮಗಾರಿಗಳಿಗೆ ಆದ್ಯತೆಯನ್ನು ನೀಡಬೇಕಾಗಿರುವುದು ಪ್ರಸಕ್ತ ಆರ್ಥಿಕ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿರುತ್ತದೆ. ಆದ್ದರಿಂದ ಈ ನಿಟ್ಟಿನಲ್ಲಿ ಆಡಳಿತಾತ್ಮಕ ವೆಚ್ಚ, ನಿರ್ವಹಣೆ ಕಾಮಗಾರಿಗಳಿಗೆ ಆದ್ಯತೆಯನ್ನು ಈ ಸಾಲಿನ ಆಯವ್ಯಯದಲ್ಲಿ ನೀಡಲಾಗಿದೆ ಹಾಗೂ ಅಗತ್ಯವಾದ ಅಭಿವೃದ್ಧಿ ಕಾಮಗಾರಿಗಳಿಗೆ ಮಾತ್ರ ಅನುದಾನದ ಅವಕಾಶವನ್ನು ಕಲ್ಪಿಸಲಾಗಿದೆ. ಪಾಲಿಕೆಯನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವ ನಿಟ್ಟಿನಲ್ಲಿ ಈ ಕ್ರಮ ಅನಿವಾರ್ಯವಾಗಿದ್ದು ತಮ್ಮೆಲ್ಲರ ಸಹಕಾರನ್ನು ಕೋರುತ್ತಿದ್ದೇನೆ.

## 2014-15ನೇ ಸಾಲಿನ ಪರಿಷ್ಕೃತ ಆಯವ್ಯಯ:-

2014-15ನೇ ಸಾಲಿನ ಆಯವ್ಯಯದಲ್ಲಿ ಅಂದಾಜಿಸಿದ್ದ ಪ್ರಕಾರ, ಒಟ್ಟು ಸ್ವೀಕೃತಿಗಳು **ರೂ.5977.92** ಕೋಟಿಗಳು, ಪರಿಷ್ಕೃತ ಅಂದಾಜುಗಳ ಪ್ರಕಾರ ಒಟ್ಟು ಸ್ವೀಕೃತಿಗಳು **ರೂ.2894.13** ಕೋಟಿಗಳಾಗಿರುತ್ತದೆ. ಒಟ್ಟು ವೆಚ್ಚಗಳು **ರೂ..6024.52** ಕೋಟಿಗಳೆಂದು ಪ್ರಸ್ತಾಪಿಸಿದ್ದು, ಪರಿಷ್ಕೃತ ಅಂದಾಜುಗಳ ಪ್ರಕಾರ ಒಟ್ಟು ವೆಚ್ಚಗಳು **ರೂ. 2927.25** ಕೋಟಿಗಳಾಗಿರುತ್ತದೆ.

## 2015-16ನೇ ಸಾಲಿನ ಆಯವ್ಯಯ ಅಂದಾಜು:

**2015-16**ನೇ ಸಾಲಿನಲ್ಲಿ ಪ್ರಾರಂಭಿಕ ಶಿಲ್ಕು **ರೂ.17.17** ಕೋಟಿ, ಸ್ವೀಕೃತಿಗಳು **ರೂ.6,712.45** ಕೋಟಿ ಒಟ್ಟಾರೆ **ರೂ.6,729.62** ಕೋಟಿಗಳ ವರಮಾನವೆಂದು ಅಂದಾಜಿಸಲಾಗಿದೆ. ಇದರಲ್ಲಿ **ರೂ.2000.25** ಕೋಟಿ ತೆರಿಗೆ ಆದಾಯ, **ರೂ.844.64 ಕೋಟಿ** ತೆರಿಗೆಯೇತರ ಆದಾಯ ಹಾಗೂ **ರೂ.2,902.29** ಕೋಟಿ ಸರ್ಕಾರದ ಅನುದಾನ ಮತ್ತು **ರೂ.965.28** ಕೋಟಿ ಇತರೆ ಆದಾಯಗಳನ್ನು ಒಳಗೊಂಡಿರುತ್ತದೆ ಹಾಗೂ ಸದರಿ ಸಾಲಿನಲ್ಲಿ ಒಟ್ಟು ವೆಚ್ಚ **ರೂ.6,728.98** ಕೋಟಿಗಳೆಂದು ಪ್ರಸ್ತಾಪಿಸಿದ್ದು, ಇದರಲ್ಲಿ ರಾಜಸ್ವ ವೆಚ್ಚ **ರೂ.2,243.22 ಕೋಟಿ** ಹಾಗೂ ಬಂಡವಾಳ ವೆಚ್ಚ **ರೂ.4,486.40 ಕೋಟಿಗಳಾಗಿದ್ದು,** 2015-16ನೇ ಸಾಲಿಗೆ **ರೂ.64.00 ಲಕ್ಷ** ಹೆಚ್ಚುವರಿ ಆಯವ್ಯಯವೆಂದು ನಿರೀಕ್ಷಿಸಲಾಗಿದೆ.

## ಪ್ರಸ್ತುತ ಪಾಲಿಕೆಯ ಆರ್ಥಿಕ ಸ್ಥಿತಿ:

ಪ್ರಸ್ತುತ ಪಾಲಿಕೆಯ ಆರ್ಥಿಕ ಸಂಕ್ಷಷ್ಟದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆರ್ಥಿಕ ನೆರವು ಅತ್ಯಗತ್ಯವಾಗಿರುತ್ತದೆ. ಈಗಾಗಲೇ ಹಲವಾರು ಬೃಹತ್ ಕಾಮಗಾರಿಗಳನ್ನು ಸರ್ಕಾರದ ಅನುದಾನ ಮತ್ತು ಪಾಲಿಕೆಯ ಅಲ್ಪ ಆದಾಯದಲ್ಲಿ ನಿರ್ವಹಿಸಲಾಗುತ್ತಿದ್ದು, ಜನತೆಯ ಆಶೋತ್ತರಗಳಿಗೆ ಸ್ಪಂಧಿಸಲು 2014-15ನೇ ಸಾಲಿನಲ್ಲಿ ಬಿಡುಗಡೆಗೆ ಬಾಕಿ ಇರುವ ಅನುದಾನವು ಸೇರಿದಂತೆ 2015-16ನೇ ಸಾಲಿಗೆ ಒಟ್ಟಾರೆ ರೂ.5,480.47 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲು ಘನ ರಾಜ್ಯ ಸರ್ಕಾರವನ್ನು ಕೋರಲಾಗಿದೆ.

**ಆಡಳಿತದಲ್ಲಿ ಸುಧಾರಣೆ::**

- ಇ ಆಡಳಿತವನ್ನು ಪಾಲಿಕೆಯಲ್ಲಿ ತರುವ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ.
- ಹಣಕಾಸು ಮತ್ತು ಲೆಕ್ಕಪತ್ರ ವಿಭಾಗದಲ್ಲಿ ಹಾಲಿ ಇರುವ IFMS - Integrated Financial Management System ತಂತ್ರಾಂಶವನ್ನು ಉನ್ನತೀಕರಿಸಲಾಗಿದೆ.
- ಎಲ್ಲಾ ಆರ್ಥಿಕ ವ್ಯವಹಾರಗಳನ್ನು ಆನ್‌ಲೈನ್ ಮೂಲಕ ಜಾರಿಗೆ ತರಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು.
- ಪಾಲಿಕೆಯ ಸಿಬ್ಬಂಧಿ ವರ್ಗದಲ್ಲಿ ಆಡಳಿತ ದಕ್ಷತೆ, ಕಾರ್ಯಕ್ಷಮತೆ ಹಾಗೂ ವೃತ್ತಿಪರತೆಯನ್ನು ಹೆಚ್ಚಿಸಲು ವಿವಿಧ ಹಂತದ ವೃತ್ತಿಪರ ಆಡಳಿತ ತರಬೇತಿಯನ್ನು ನೀಡುವ ಕ್ರಿಯೆಯನ್ನು ಮುಂದುವರೆಸಲಾಗುವುದು.
- ಆಡಳಿತಾತ್ಮಕ ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮವನ್ನು ವಹಿಸಲಾಗುವುದು.
- ಕಸ ವಿಲೇವಾರಿಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಈಗಾಗಲೇ 4000 ಸಾವಿರ ಪೌರ ಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ನೇಮಕಾತಿ ಪ್ರಕ್ರಿಯೇ ಪ್ರಗತಿಯಲ್ಲಿರುತ್ತದೆ.
- ಕಾನೂನು ಇಲಾಖೆಯವರು ಉತ್ತಮ ಕಾರ್ಯನಿರ್ವಹಿಸಿ ಪಾಲಿಕೆಯಿಂದ ಕೈಬಿಟ್ಟು ಹೋಗಿದ್ದ ಆಸ್ತಿಗಳನ್ನು ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ, ನ್ಯಾಯಾಲಯದಲ್ಲಿ ಪರಿಣಾಮಕಾರಿಯಾಗಿ ವಾದಿಸಿ ಆಸ್ತಿಗಳನ್ನು ಪಾಲಿಕೆಯ ಸುಪರ್ಧಿಗೆ ತೆಗೆದುಕೊಳ್ಳಲು ಶ್ರಮಿಸಿರುತ್ತಾರೆ.

## 2015-16ನೇ ಸಾಲಿನಲ್ಲಿ ನಿರೀಕ್ಷಿಸಲಾದ ತೆರಿಗೆ ಮತ್ತು ತೆರಿಗೆಯೇತರ ವರಮಾನಗಳು:

### 1. ಕಂದಾಯ ವಿಭಾಗ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಂತ ವರಮಾನಗಳಲ್ಲಿ ಆಸ್ತಿ ತೆರಿಗೆಯೇ ಅತಿ ಪ್ರಮುಖವಾಗಿದ್ದು, ಆಸ್ತಿ ತೆರಿಗೆ ಸ್ವೀಕೃತಿಯನ್ನು ಸಂಗ್ರಹಿಸುವಲ್ಲಿ ಹೆಚ್ಚಿನ ಒತ್ತು ನೀಡುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

- ಪಾಲಿಕೆಯ ವ್ಯಾಪ್ತಿಯಲ್ಲಿ ಭೌಗೋಳಿಕ ಸಮೀಕ್ಷೆ ಅಡಿಯಲ್ಲಿ ಸ್ವತ್ತುಗಗಳಿಗೆ ಪಿ.ಐ.ಡಿ. ಸಂಖ್ಯೆಗಳನ್ನು ನೀಡುವ ಕಾರ್ಯವು ಶೇ.85ರಷ್ಟು ಮುಕ್ತಾಯಗೊಂಡಿದ್ದು, ಬಾಕಿ ಉಳಿದ ಸ್ವತ್ತುಗಳಿಗೆ ಪಿ.ಐ.ಡಿ. ಸಂಖ್ಯೆಗಳನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.
- ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಟ್ಟಡಗಳಿಂದ ಸೇವಾ ಶುಲ್ಕವನ್ನು ಕಡ್ಡಾಯವಾಗಿ ವಸೂಲಿ ಮಾಡಲು ಕ್ರಮಕೈಗೊಳ್ಳಲಾಗುವುದು.

- ಪಾಲಿಕೆ ವ್ಯಾಪ್ತಿಯಲ್ಲಿ ಪಾವತಿಸುವ ಅತಿಥಿ ಗೃಹಗಳು ಮತ್ತು ಪಿ.ಜಿ. ಹಾಸ್ಟಲ್‌ಗಳನ್ನು ವಸತಿಯೇತರ ತೆರಿಗೆ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ.
- ಬೃಹತ್ ಬೆಂಗಳೂರು ಮಹನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂ ಪರಿವರ್ತನೆಯಾಗಿರುವ ಸ್ವತ್ತುಗಳಿಂದ ಸುಧಾರಣಾ ವೆಚ್ಚವನ್ನು ಸಂಗ್ರಹಿಸಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗುವುದು.

ಮೇಲ್ಕಂಡ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಇದರಿಂದಾಗಿ ಪ್ರಸಕ್ತ ಸಾಲಿನಲ್ಲಿ ಕಂದಾಯ ವಿಭಾಗದಿಂದ, ಆಸ್ತಿ ತೆರಿಗೆಯ ರೂಪದಲ್ಲಿ **ರೂ.2,000.00** ಕೋಟಿ ಸೆಸ್ ಸಂಗ್ರಹ **ರೂ.480.00** ಕೋಟಿ, ಸುಧಾರಣೆ ಶುಲ್ಕ **ರೂ.15.00** ಕೋಟಿ ಒಟ್ಟಾರೆ **ರೂ.2,636.70** ಕೋಟಿಗಳನ್ನು ನಿರೀಕ್ಷಿಸಲಾಗಿದೆ.

### 2. ಮಾರುಕಟ್ಟೆ ವಿಭಾಗ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂಗಡಿ/ವಾಣಿಜ್ಯ ಸಂಕೀರ್ಣಗಳಿಂದ ಬಾಡಿಗೆಯನ್ನು ಸಂಗ್ರಹಿಸಲಾಗುತ್ತಿದ್ದು, ಈ ಸ್ವೀಕೃತಿಯು ಸಹ ಪಾಲಿಕೆಯ ಸ್ವಂತ ಆದಾಯಗಳಲ್ಲಿ ಒಂದಾಗಿರುತ್ತದೆ. ಮಾರುಕಟ್ಟೆ ಸ್ಥಾಯಿ ಸಮಿತಿಯ ಅಧ್ಯಕ್ಷರ ನೇತೃತ್ವದಲ್ಲಿ ಸಮಿತಿಯು ಪಾಲಿಕೆ ವ್ಯಾಪ್ತಿಯಲ್ಲಿನ ವಾಣಿಜ್ಯ ಸಂಕೀರ್ಣಗಳನ್ನು ಮತ್ತು ಬಾಡಿಗೆ ನೀಡಿರುವ ಅಂಗಡಿಗಳ ಬಗ್ಗೆ ಪರಿಶೀಲನೆ ಮಾಡಿ ಬಾಡಿಗೆ ಮತ್ತು ಶುಲ್ಕವನ್ನೂ ಸಹ ಪರಿಷ್ಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸುಮಾರು **ರೂ.75.00** ಕೋಟಿಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

### 3. ಜಾಹೀರಾತು ತೆರಿಗೆ:

ಕೆ.ಎಂ.ಸಿ. ಕಾಯಿದೆ ಅನುಸಾರ ಜಾಹೀರಾತು ತೆರಿಗೆಯು ಸಹ ಒಂದಾಗಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಜಾಹೀರಾತು ನಮ್ಮ ನಿರೀಕ್ಷಿಸಿದಷ್ಟು ಆದಾಯ ತರುವಲ್ಲಿ ಹಿನ್ನೆಡೆ ಅನುಭವಿಸಿದೆ. ಈ ಕಾರಣದಿಂದ ಘನ ಉಚ್ಚ ನ್ಯಾಯಾಲಯಗಳು ಮತ್ತು ಲೋಕಾಯುಕ್ತ ಸಂಸ್ಥೆಗಳಿಂದ ಪಾಲಿಕೆಯು ನಿಂದನೆಗೆ ಒಳಗಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಸೌಂಧರೀಕರಣದ ಹಿತದೃಷ್ಟಿಯಿಂದ ನಗರವನ್ನು ಜಾಹೀರಾತು ಮುಕ್ತ ನಗರವನ್ನಾಗಿ ಮಾಡಲು ಪಾಲಿಕೆಯು ನಿರ್ಣಯವನ್ನು ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಹಾಗೂ ಈ ಜಾಹೀರಾತು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂಧಗಳನ್ನು ಕಂದಾಯ ವಿಭಾಗಕ್ಕೆ ನಿಯೋಜಿಸಿ ಪಾಲಿಕೆಯ ಸ್ವಂತ ಅಧಾಯವನ್ನು ಹೆಚ್ಚಿಸಲು ಕ್ರಮವಹಿಸಲಾಗುವುದು.

### 4. ಆಪ್ಟಿಕಲ್ ಫೈಬರ್ ಕೇಬಲ್ ಶುಲ್ಕ:

ಆಪ್ಟಿಕಲ್ ಫೈಬರ್ ಕೇಬಲ್ ನೀತಿಯ ಅನುಸಾರ ಓ.ಎಫ್.ಸಿ. ಸೇವಾ ಸಂಸ್ಥೆಗಳು, ಟೆಲಿಕಾಂ ಕಂಪನಿಗಳ ಸಂಸ್ಥೆಗಳೊಂದಿಗೆ ಚರ್ಚಿಸಿ ಒಡಂಬಡಿಕೆ ಮಾಡಿಕೊಂಡು ಬಾಡಿಗೆ ಮತ್ತು ಶುಲ್ಕವನ್ನು ಸಂಗ್ರಹಿಸಲು ಕ್ರಮಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಓ.ಎಫ್.ಸಿ. ಶುಲ್ಕ **ರೂ.300.00** ಕೋಟಿಗಳನ್ನು ಒಳಗೊಂಡಂತೆ ಒಟ್ಟಾರೆ **ರೂ.333.65** ಕೋಟಿಗಳನ್ನು ನಿರೀಕ್ಷಿಸಲಾಗಿದೆ.

5. **ಘನತ್ಯಾಜ್ಯ ವಸ್ತು ನಿರ್ವಹಣೆ ಕರವನ್ನು** ಪಾಲಿಕೆಯಿಂದ ವಸತಿ ಮತ್ತು ವಸತಿಯೇತರ ಸ್ವತ್ತುಗಳಿಂದ ಸಂಗ್ರಹಿಸಲಾಗುತ್ತಿರುವ ಆಸ್ತಿ ತೆರಿಗೆಯೊಂದಿಗೆ ಘನತ್ಯಾಜ್ಯ ವಸ್ತು ನಿರ್ವಹಣೆ ಕರವನ್ನು ಸಹ ಸಂಗ್ರಹಿಸಲಾಗುತ್ತಿದ್ದು, ಪ್ರಸ್ತುತ ಸಾಲಿನಲ್ಲಿ **ರೂ.30.00** ಕೋಟಿಗಳನ್ನು ನಿರೀಕ್ಷಿಸಲಾಗಿದೆ.

6. **ವ್ಯಾಪಾರ ಪರವಾನಿಗೆಯ** ಮೂಲಕ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು ನಾಲ್ಕು ಲಕ್ಕಕ್ಕೂ ಹೆಚ್ಚಾಗಿ ಟ್ರೇಡ್ ಉದ್ಯಮಗಳಿರುವುದಾಗಿ ಅಂದಾಜಿಸಿದ್ದು, ಸದರಿ ಉದ್ದಿಮೆಗಳಿಗೆ ನೀಡುವ ಪರವಾನಿಗೆಯಿಂದ **ರೂ.8.12** ಕೋಟಿಗಳನ್ನು ನಿರೀಕ್ಷಿಸಲಾಗಿದೆ.

7. **ನಗರ ಯೋಜನೆ ವಿಭಾಗ ದಿಂದ ಶುಲ್ಕ ಮತ್ತು ದಂಡ ಹಾಗೂ ಇತರೇ ಸ್ವೀಕೃತಿಗಳ ಮೂಲಕ ಒಟ್ಟಾರೆ ರೂ.237.50 ಕೋಟಿಗಳನ್ನು ಸಂಗ್ರಹಿಸಲು ಉದ್ದೇಶಿಸಲಾಗಿದೆ.**

8. **ಘನ ಸರ್ಕಾರದ ಅನುದಾನಗಳು:**
ಘನ ಕರ್ನಾಟಕ ರಾಜ್ಯ ಸರ್ಕಾರದಿಂದ, ರಾಜ್ಯ ಹಣಕಾಸು ಆಯೋಗದ ಅನುದಾನ, 14ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ರೂ.391.06 ಕೋಟಿ ಮುಖ್ಯ ಮಂತ್ರಿಗಳ ನಗರೋಥ್ಥಾನದ ಅನುದಾನ ರೂ.1000.00 ಕೋಟಿ ಮತ್ತು ಹೆಚ್ಚುವರಿ ರೂ.1500.00 ಕೋಟಿ ಸೇರಿದಂತೆ **ಒಟ್ಟಾರೆ ರೂ.2891.06** ಕೋಟಿಗಳನ್ನು ಆಯವ್ಯಯದಲ್ಲಿ ಘೋಷಿಸಲಾಗಿದೆ. ಭಾರತ ಸರ್ಕಾರದ ಅನುದಾನದ ಅಡಿಯಲ್ಲಿ ರೂ.11.00 ಕೋಟಿಗಳನ್ನು ನಿರೀಕ್ಷಿಸಲಾಗಿದೆ.

ಮೇಲ್ಕಂಡಂತೆ 2015-16ನೇ ಸಾಲಿನಲ್ಲಿ ಪಾಲಿಕೆಯ ಸ್ವಂತ ಆದಾಯ ಹಾಗೂ ಸರ್ಕಾರದ ಅನುದಾನಗಳು ಸೇರಿದಂತೆ ಒಟ್ಟಾರೆ **ರೂ.6712.45** ಕೋಟಿ ವರಮಾನವನ್ನು ನಿರೀಕ್ಷಿಸಲಾಗಿದೆ.

## 2015-16ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಜನಪರ ಕಾರ್ಯಕ್ರಮಗಳು ಮತ್ತು ನಿರ್ವಹಣೆ ಕಾಮಗಾರಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸಕ್ತ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಕಲ್ಯಾಣ, ಆರೋಗ್ಯ, ಶಿಕ್ಷಣ ವಿಭಾಗದ ಜನಪರ ಕಾರ್ಯಕ್ರಮಗಳು, ಘನತ್ಯಾಜ್ಯ ನಿರ್ವಹಣೆ, ವಿದ್ಯುತ್, ತೋಟಗಾರಿಕೆ, ಅರಣ್ಯೀಕರಣ, ಅಭಿವೃದ್ಧಿ ಮತ್ತು ದುರಸ್ತಿ ನಿರ್ವಹಣೆ ಕಾಮಗಾರಿಗಳಿಗೆ ಆದ್ಯತೆ ನೀಡಲಾಗಿದೆ.

ಪ್ರಸ್ತುತ ಹಾಲಿ ಮಂಜೂರಾಗಿ ಪ್ರಗತಿಯಲ್ಲಿರುವ ಯೋಜನೆ ಕಾಮಗಾರಿಗಳು ಹಾಗೂ ಮುಂದುವರೆದ ಅಭಿವೃದ್ಧಿ ಕಾಮಗಾರಿಗಳು, ಪ್ರಮುಖವಾಗಿ ಬೃಹತ್ ಮಳೆ ನೀರುಗಾಲುವೆ ಚರಂಡಿ ಅಭಿವೃದ್ಧಿ ಕಾಮಗಾರಿಗಳು, ಮೂಲಭೂತ ಸೌಕರ್ಯ ವಿಭಾಗದ ಕಾಮಗಾರಿಗಳು, ಹಾಗೂ ಸರ್ಕಾರದ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಸೇರಿದಂತೆ, ಕಾಮಗಾರಿಗಳು ಪ್ರಗತಿ/ಚಾಲ್ತಿಯಲ್ಲಿದ್ದು, ಸದರಿ ಕಾಮಗಾರಿಗಳಿಗೆ ಒತ್ತು ನೀಡಿ ಮುಕ್ತಾಯಗೊಳಿಸಲು ನಿರ್ಧರಿಸಲಾಗಿರುತ್ತದೆ.

## 1. ಕಲ್ಯಾಣ ಕಾರ್ಯಕ್ರಮಗಳು:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಶೇ.24.10ರ ಅನುದಾನದಲ್ಲಿ ಪರಿಶಿಷ್ಠ ಜಾತಿ/ಪಂಗಡದ ಜನರ ಅಭಿವೃದ್ಧಿಗಾಗಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ, ಅದರಂತೆ, ವಸತಿ ಸೌಲಭ್ಯಗಳ ಅಡಿಯಲ್ಲಿ ವೈಯಕ್ತಿಕ ಮನೆಗಳ ನಿರ್ಮಾಣ, ಸಮುದಾಯ ಸೌಲಭ್ಯ, ವ್ಯಕ್ತಿಗತ ಸೌಲಭ್ಯ, ಆರ್ಥಿಕ ಸಹಾಯವನ್ನು ಪ್ರತಿ ಆರ್ಥಿಕ ಸಾಲಿನಲ್ಲಿ ನೀಡುತ್ತಾ ಬಂದಿದ್ದು, ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರೆಸಲಾಗುತ್ತಿದೆ.

ಕಲ್ಯಾಣ ಚಟುವಟಿಕೆಗಳ ಅಡಿಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣ, ಉನ್ನತ ವ್ಯಾಸಂಗ ವಿಕಲಚೇತರು ಹಾಗೂ ಅಂಗವಿಕಲರ ಕಲ್ಯಾಣ ಮತ್ತು ಮಹಿಳಾ ಕಲ್ಯಾಣ ಕಾರ್ಯಕ್ರಮವನ್ನು ಮುಂದುವರೆಸಲಿದೆ.

ಪ್ರಸಕ್ತ ಸಾಲಿನಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ಒಟ್ಟಾರೆ **ರೂ.401.00** ಕೋಟಿ ಮೀಸಲಿಡಲಾಗಿದೆ.

## 2. ಸಂಸ್ಕೃತಿ ಮತ್ತು ಕ್ರೀಡಾ ಕಾರ್ಯಕ್ರಮಗಳು:

ಈ ಹಿಂದೆ ತಿಳಿಸಿದಂತೆ, ಬೆಂಗಳೂರು ದಕ್ಷಿಣದ ಭಾಗದ ಅಂತರಾಷ್ಟ್ರೀಯ ಮಟ್ಟದ ಬೃಹತ್ ಕ್ರೀಡಾಂಗಣವನ್ನು ನಿರ್ಮಿಸಿ ಸಾರ್ವಜನಿಕರಿಗೆ ಅರ್ಪಿಸಲು ಆಯವ್ಯಯದಲ್ಲಿ ಘೋಷಿಸಲಾಗಿದ್ದು, ಅದರಂತೆ, ಜಯನಗರದ ಭೈರಸಂದ್ರ ವಾರ್ಡ್‌ನಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಉನ್ನತೀಕರಿಸುವ ಕಾರ್ಯ ಅಂತಿಮವಾಗಿದ್ದು, **ಏಪ್ರಿಲ್ 2015, ಮೊದಲವಾರದಲ್ಲಿ** ಉದ್ಘಾಟನೆಗೊಳ್ಳಲಿದೆ.

ಇದಲ್ಲದೇ ಪಾಲಿಕೆ ವ್ಯಾಪ್ತಿಯಲ್ಲಿ ಅನೇಕ ಆಟದ ಮೈದಾನಗಳನ್ನು ಈ ಹಿಂದೆ ತಿಳಿಸಿದಂತೆ ಮಕ್ಕಳನ್ನು ಮರಳಿ ಬಾ ಆಟದ ಮೈದಾನಕ್ಕೆ ಎಂಬ ಘೋಷಣೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗಿದೆ.

## 3. +ಆರೋಗ್ಯ ಕಾರ್ಯಕ್ರಮಗಳು:

- **ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನವನ್ನು** ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲಾಗುವುದು ಸದರಿ ಯೋಜನೆಯ ಅನುಷ್ಠಾನಕ್ಕೆ ರೂ.5.00 ಕೋಟಿ ಮೀಸಲಿರಿಸಿದೆ.
- ಪಾಲಿಕೆಯಲ್ಲಿ ರೆಫರಲ್ ಆಸ್ಪತ್ರೆಗಳು ಮತ್ತು ಡಯಾಲಿಸಿಸ್ ಸೆಂಟರ್‌ಗಳು ಕಾಯನಿರ್ವಹಿಸುತ್ತಿದ್ದು, ಇವುಗಳನ್ನು ಉನ್ನತೀಕರಣಗೊಳಿಸಲು ಕ್ರಮಕೈಗೊಳ್ಳಲಾಗಿದೆ.
- ಪಾಲಿಕೆಯ ಎಲ್ಲಾ ಹೆರಿಗೆ ಮತ್ತು ರೆಫರಲ್ ಆಸ್ಪತ್ರೆಗಳಲ್ಲಿ ಗರ್ಭಿಣಿಯರಿಗೆ **ಉಚಿತವಾಗಿ** ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ವ್ಯವಸ್ಥೆಯನ್ನು ನೀಡುವ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು.

  ಆರೋಗ್ಯ ವಿಭಾಗಕ್ಕೆ ಒಟ್ಟಾರೆ **ರೂ.105.08** ಕೋಟಿಗಳನ್ನು ಆಯವ್ಯಯದಲ್ಲಿ ಮೀಸಲಿರಿಸಿದೆ.

## 4. ಶಿಕ್ಷಣ ಕಾರ್ಯಕ್ರಮಗಳು:

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಡೆಸುತ್ತಿರುವ ಒಟ್ಟು 152 ನರ್ಸರಿ, ಪ್ರೈಮರಿ, ಪ್ರೌಢಶಾಲೆ, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಪ್ರಮುಖವಾಗಿ ಹೆಣ್ಣು ಮಕ್ಕಳು ವ್ಯಾಸಾಂಗ ಮಾಡುತ್ತಿರುವ ಶಾಲಾ ಕಾಲೇಜುಗಳಲ್ಲಿ ಆದ್ಯತೆ ನೀಡಿ ಒಟ್ಟು 396 ಸಿ.ಸಿ. ಕ್ಯಾಮರಗಳನ್ನು ಅಳವಡಿಸಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಆಯವ್ಯಯದಲ್ಲಿ **ರೂ.100.00** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.
- **"ಜ್ಞಾನದೀಪ"** ಬೆಳಗಿಸುವ ಸಲುವಾಗಿ ಪಾಲಿಕೆ/ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಏಡ್ಸ್ ಪೀಡಿತ ಹಾಗೂ ಅರ್ಹ ಅಂಗವಿಕಲ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ನೀಡಲಾಗುವುದು. ಇದಕ್ಕಾಗಿ **ರೂ.25.00** ಲಕ್ಷಗಳನ್ನು ಆಯವ್ಯಯದಲ್ಲಿ ಮೀಸಲಿರಿಸಿದೆ.
- ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು, ಈ ಸೌಲಭ್ಯಗಳಿಗೆ ರೂ.2.00 ಕೋಟಿಗಳನ್ನು ಮೀಸಲಿರಿಸಿದೆ
- ಪಾಲಿಕೆಯ ಹೈಸ್ಕೂಲ್ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕವನ್ನು ಪಡೆಯಲು ಮತ್ತು ಸ್ಪರ್ಧಾತ್ಮಕ ಜ್ಞಾನವನ್ನು ಹೊಂದಲು ವಿಶೇಷ ತರಗತಿಗಳ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು.

ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ ಶಿಕ್ಷಣ ವಿಭಾಗಕ್ಕೆ **ರೂ.20.66** ಕೋಟಿ ಮೀಸಲಿರಿಸಿದೆ.

## 5. ತೋಟಗಾರಿಕೆ ಕಾರ್ಯಕ್ರಮಗಳು:

ಬೆಂಗಳೂರು ನಗರವನ್ನು ಉದ್ಯಾನ ನಗರವೆಂದು ನಾಮಾಂಕಿತ ಮಾಡುವಲ್ಲಿ ಪಾಲಿಕೆಯ ಕೊಡುಗೆ ಬಹು ಮುಖ್ಯವಾಗಿರುತ್ತದೆ. ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಸಣ್ಣ ಒಟ್ಟು 1237 ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ನಿರ್ವಹಿಸಲಾಗುತ್ತಿದೆ. ಇದರಿಂದ ಬೆಂಗಳೂರಿನ ಹಸಿರು ಪರಿಸರವನ್ನು ಕಾಪಾಡುವಲ್ಲಿ ದೇಶದಲ್ಲಿಯೇ ಮಾದರಿ  ನಗರವಾಗಿದೆ. ಪ್ರತಿ ವಾರ್ಡ್‌ಗಳಲ್ಲಿ ಉದ್ಯಾನವನ್ನುಗಳನ್ನು ಅಭಿವೃದ್ಧಿ ಪಡಿಸಿ ನಿರ್ವಹಿಸಲು ಹೆಚ್ಚಿನ ಆಸಕ್ತಿ ವಹಿಸಲಾಗಿದೆ. ಖಾಲಿ ಇರುವ ಪಾಲಿಕೆಯ ಸ್ವತ್ತುಗಳನ್ನು ಉದ್ಯಾನವನಗಳನ್ನಾಗಿ ಪರಿವರ್ತಿಸಿ ಅಭಿವೃದ್ದಿ ಪಡಿಸುವ ಕಾರ್ಯವನ್ನು ಮುಂದುವರೆಸಲಾಗುವುದು.

ಪಾಲಿಕೆಯ ಪ್ರಸಕ್ತ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಉದ್ಯಾನವನಗಳ ನಿರ್ವಹಣೆಗೆ ಆಧ್ಯತೆಯನ್ನು ನೀಡಲಾಗಿದ್ದು, ಒಟ್ಟಾರೆ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಮುಂದುವರೆದ ಕಾಮಗಾರಿಗಳು ಸೇರಿದಂತೆ ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ **ರೂ.76.56** ಕೋಟಿಗಳನ್ನು ಮೀಸಲಿರಿಸಿದೆ.

## 6. ಅರಣ್ಯೀಕರಣ ಕಾರ್ಯಕ್ರಮಗಳು:

ಪಾಲಿಕೆಯ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ವಿಭಾಗದ ವತಿಯಿಂದ ಬೆಂಗಳೂರಿನ ಪಾರಂಪರಿಕ ಹಸಿರ ಪರಿಸರವನ್ನು ರಕ್ಷಿಸುವ ಸಲುವಾಗಿ ರಸ್ತೆ ಬದಿಯಲ್ಲಿ ಗಿಡಗಳನ್ನು ನೆಡುವುದು, ಮರಭಾವಣಿ ನಿರ್ವಹಣೆ, ವೃಕ್ಷ ಕವಚಗಳನ್ನು ಅಳವಡಿಸುವುದು, ಸಸ್ಯ ಕ್ಷೇತ್ರಗಳಲ್ಲಿ ಬೆಳೆಸಲಾದ ಸಸಿಗಳನ್ನು ಪೋಷಿಸುವಂತಹ ಹಲವಾರು **ಹಸಿರು** ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿರುತ್ತದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯವು ನೀಡಿದ ನಿರ್ದೇಶನದಂತೆ ಪಾಲಿಕೆಯ ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಅವುಗಳು ಹೆಚ್ಚಿನ ಪ್ರಮಾಣದಲ್ಲಿ ಬದುಕುಳಿಯುವಂತೆ ಯಶಸ್ವಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಹಾಗೂ ನಗರದಾದ್ಯಂತ ಬೃಹತ್ ವಸತಿ ಸಂಕೀರ್ಣ ವಾಣಿಜ್ಯ ಕಟ್ಟಡಗಳು ತಲೆ ಎತ್ತುತ್ತಿದ್ದು ಅಲ್ಲದೇ ರಸ್ತೆ ಅಗಲೀಕರಣ, ಮೆಟ್ರೋ ರೈಲು ಯೋಜನೆ, ವಿದ್ಯುತ್ ತಂತಿ ಹಾದು ಹೋಗುವ ಮುಂತಾದ ಕಾರಣಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಮರಗಳನ್ನು ಕಡಿಯುತ್ತಿರುವುದು ಒಂದು ಅನಿವಾರ್ಯ ಪ್ರಕ್ರಿಯೆಯಾಗಿದೆ. ಇದಲ್ಲದೆ ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯಿಂದ ಪರಿಸರದ ಮೇಲೆ ಉಂಟಾದ ವ್ಯತಿರಿಕ್ತ ಪರಿಣಾಮವನ್ನು ಕಡಿಮೆ ಮಾಡುವ ಹಾಗೂ ಹೆಚ್ಚುತ್ತಿರುವ ಜಾಗತಿಕ ತಾಪಮಾನದ ಹಿನ್ನೆಲೆಯಲ್ಲಿ ನಗರ ಅರಣ್ಯೀಕರಣವು ಒಂದು ಪ್ರಮುಖ ವಿಷಯವಾಗಿದ್ದು ಆದ್ಯತೆಯ ಮೇಲೆ ಕೈಗೊಳ್ಳಬೇಕಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ **ರೂ.41.52** ಕೋಟಿ ಮೀಸಲಿರಿಸಿದೆ.

## 7. ಮಳೆ ನೀರು ಕೊಯ್ಲು:

ಮಳೆ ನೀರು ಕೊಯ್ಲು ಯೋಜನೆಯು ಅತ್ಯಂತ ಯಶಸ್ವಿ ಯೋಜನೆಯಾಗಿದ್ದು, ಬೆಂಗಳೂರು ನಗರದ ಅಂತರ್ಜಲದ ಮಟ್ಟ ಹೆಚ್ಚಿದೆ ಎಂದು ತಿಳಿದುಬಂದಿರುತ್ತದೆ. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸಲು ಪಾಲಿಕೆ/ಸರ್ಕಾರಿ ಕಟ್ಟಡಗಳು, ಉದ್ಯಾನವನಗಳು ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಲು ಕಡ್ಡಾಯಗೊಳಿಸಲಾಗುವುದು.

## 8. ಕೆರೆಗಳ ಅಭಿವೃದ್ಧಿ:

ಪ್ರಸ್ತುತ ಪಾಲಿಕೆಯ ವಶದಲ್ಲಿ 82 ಕೆರೆಗಳಿದ್ದು, ಈ ಕೆರೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಈ ಪೈಕಿ ಈಗಾಗಲೆ 46 ಕೆರೆಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿ ಮಳೆ ನೀರನ್ನು ಸಂಗ್ರಹಿಸಲಾಗಿದೆ. ಸಾರ್ವಜನಿಕ ಈ ಕೆರೆಗಳನ್ನು

ವಾಯುವಿಹಾರಕ್ಕೆ ಉಪಯೋಗಿಸುತ್ತಿರುತ್ತಾರೆ. ಇದರೊಂದಿಗೆ, 11 ಕೆರೆಗಳನ್ನು ವಾರ್ಷಿಕವಾಗಿ ನಿರ್ವಹಣೆ ಮಾಡಲು ಸ್ಥಳೀಯ ನಿವಾಸಿಗಳ ಸಂಘಗಳಿಗೆ ವಹಿಸಿಕೊಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸರ್ಕಾರದ ಅನುದಾನದೊಂದಿಗೆ ಮುಂದುವರೆದ ಕಾಮಗಾರಿಗಳು ಸೇರಿದಂತೆ ಒಟ್ಟಾರೆ ಕೆರೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ **ರೂ.130.00** ಕೋಟಿಗಳನ್ನು ಮೀಸಲಿರಿಸಿದೆ.

### 9. ಪಾಲಿಕೆಯ ಆಸ್ತಿಗಳ ಸಂರಕ್ಷಣೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಆಸ್ತಿ ವಹಿಯಲ್ಲಿ ದಾಖಲಿಸಿರುವ 5109 ಆಸ್ತಿಗಳಲ್ಲಿ 4708 ಆಸ್ತಿಗಳಿಗೆ ಪಿ.ಐ.ಡಿ. ಸಂಖ್ಯೆ ನೀಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಪಾಲಿಕೆಯ ಸ್ವತ್ತುಗಳ ಸಂರಕ್ಷಣೆ ಹಾಗೂ ನಿರ್ವಹಣೆಗೆ ಇಂಡೆಕ್ಸಿಂಗ್ & ಸ್ಕ್ಯಾನಿಂಗ್ ಆಫ್ ರೆಕಾರ್ಡ್ಸ್‌ರ ಅಡಿಯಲ್ಲಿ ಕ್ರಮವಹಿಸಿ ದಾಖಲೆಗಳ ಸಂರಕ್ಷಣೆ, ವರ್ಕ್ ಫ್ಲೋ (ಆನ್‌ಲೈನ್ ಪೇಪರ್‌ಲೆಸ್) ಆಸ್ತಿಗಳ ಇಂಟಿಗ್ರೇಟೆಡ್ ಅಸೆಟ್ ಮ್ಯಾನೇಜ್‌ಮೆಂಟ್ ಪದ್ಧತಿ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ರಸ್ತೆ ಅಗಲೀಕರಣ, ಕಸ ಸಂಗ್ರಹಣೆ ಮತ್ತು ಇತರೆ ಕಾರ್ಯಗಳಿಗೆ ಭೂ ಸ್ವಾಧೀನಪಡಿಸಿಕೊಳ್ಳುವುದು ಹಾಗೂ ಪಾಲಿಕೆಯ ಖಾಲಿ ಜಾಗಗಳಿಗೆ ಬೇಲಿ ನಿರ್ಮಾಣ ಮಾಡಿ ಆಸ್ತಿಗಳನ್ನು ಸಂರಕ್ಷಿಸುವ ಸಲುವಾಗಿ ಒಟ್ಟಾರೆ **ರೂ.40.40** ಕೋಟಿಗಳನ್ನು ಮೀಸಲಿರಿಸಿದೆ.

### 10. ಮಾರುಕಟ್ಟೆಗಳ ನಿರ್ಮಾಣ ಮತ್ತು ನಿರ್ವಹಣೆ:

ಹಿಂದಿನ ಪೂಜ್ಯ ಮಹಾಪೌರರು ವಿಶೇಷ ಆಸಕ್ತಿ ವಹಿಸಿ ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯನ್ನು ಸ್ವಚ್ಛಗೊಳಿಸಲು ವಿವಿಧ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳೊಂದಿಗೆ ವ್ಯಾಪಕ ಆಂದೋಲನದೊಂದಿಗೆ ಮಾರುಕಟ್ಟೆಯನ್ನು ಮಾದರಿಯಾಗಿ ಮಾಡಲು ಶ್ರಮಿಸಿದ್ದು ಸರಿಯಷ್ಟೆ. ಎಸ್.ಕೆ.ಆರ್. ಮಾರುಕಟ್ಟೆ ಮತ್ತು ಪಾಲಿಕೆಯ ಇತರೇ ಮಾರುಕಟ್ಟೆಗಳನ್ನು ಪುನರುಜ್ಜೀವನಗೊಳಿಸಿ ವಿವಿಧ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆಗಳ ನಿರ್ವಹಣೆ ಮತ್ತು ಮಲ್ಲೇಶ್ವರಂ ವಿಭಾಗದಲ್ಲಿ ಬಹುಮಹಡಿ ವಾಹನ ನಿಲ್ದಾಣವನ್ನು ನಿರ್ಮಿಸಲಾಗುವುದು. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಒಟ್ಟು **ರೂ.20.00** ಕೋಟಿಗಳನ್ನು ಮೀಸಲಿರಿಸಿದೆ.

### 11. ವಲಯ ಕಾಮಗಾರಿಗಳು:

ಬೆಂಗಳೂರು ಮಹಾನಗರದ ರಸ್ತೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಸುಗಮ ಸಂಚಾರಕ್ಕೆ ಅನುವು ಮಾಡುವ ಸಲುವಾಗಿ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವುದಕ್ಕೆ ಹಾಗೂ ನಿರ್ವಹಣೆ, ದುರಸ್ತಿ ಕಾಮಗಾರಿಗಳು ಮತ್ತು ಕುಡಿಯುವ ನೀರು ಕಾಮಗಾರಿಗಳಿಗೆ ಆದ್ಯತೆಯನ್ನು ನೀಡಲಾಗಿದೆ.

## 12. ಮೂಲಭೂತ ಸೌಕರ್ಯಗಳ ಕಾಮಗಾರಿಗಳು:

ಕರ್ನಾಟಕ ರಾಜ್ಯ ಸರ್ಕಾರವು 2015-16ನೇ ಸಾಲಿನ ಭಾಷಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ, ನಗರೋತ್ಥಾನ ಯೋಜನೆ ಅಡಿ ರೂ.1000.00 ಕೋಟಿ, ಮತ್ತು ಹೆಚ್ಚುವರಿಯಾಗಿ ರೂ.1500.00 ಕೋಟಿ ಒಟ್ಟಾರೆ ರೂ.2500.00 ಕೋಟಿಗಳ ಅನುದಾನವನ್ನು ಪಾಲಿಕೆಯ ಮೂಲಭೂತ ಸೌಕರ್ಯ ಯೋಜನೆಗಳು, ರಸ್ತೆ ಅಗಲೀಕರಣ, ಕೆರೆಗಳ ಅಭಿವೃದ್ಧಿ, ಪಾಲಿಕೆಗೆ ಸೇರ್ಪಡೆಗೊಂಡ 7 ನಗರಸಭೆ ಮತ್ತು 1 ಪುರಸಭೆ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳಿಗೆ ಆಯವ್ಯಯದಲ್ಲಿ ಘೋಷಿಸಿರುತ್ತದೆ.

- ಸರ್ಕಾರದ ಅನುದಾನದ ಬಿಡುಗಡೆಗೆ ಅನುಸಾರವಾಗಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗುವುದು.
- ರಸ್ತೆ ಮೂಲಭೂತ ಸೌಕರ್ಯದ ಅಡಿಯಲ್ಲಿ ಹೊಸದಾಗಿ ಜಂಕ್ಷನ್‌ಗಳು, ಗ್ರೇಡ್ ಸಪರೇಟರ್, ವಿಜಯನಗರದಲ್ಲಿ ಪಾಲಿಕೆ ಬಜಾರ್, ಬಹು ಮಹಡಿಗಳ ವಾಹನ ನಿಲ್ದಾಣ ಗಳನ್ನು ನಿರ್ಮಿಸಲು ಮತ್ತು ಈಗಾಗಲೇ ನಿರ್ಮಿಸಲಾಗಿರುವ ಬೃಹತ್ ಯೋಜನೆ ಕಾಮಗಾರಿಗಳನ್ನು ನಿರ್ವಹಣೆ ಮತ್ತು ದುರಸ್ತಿಗಾಗಿ ಪಾಲಿಕೆಯ ಸ್ವಂತ ಅನುದಾನ ಮತ್ತು ನಗರೋತ್ಥಾನ ಅನುದಾನದ ಅಡಿಯಲ್ಲಿ ಹಮ್ಮಿಕೊಳ್ಳಲಾಗುವುದು.

## 13. ಬೃಹತ್ ಮಳೆ ನೀರುಗಾಲುವೆ ಕಾಮಗಾರಿಗಳು:

ಭಾರತ ಸರ್ಕಾರದ ಅನುದಾನದ ಅಡಿಯಲ್ಲಿ ಬೃಹತ್ ಮಳೆ ನೀರುಗಾಲುವೆಗಳ ಸಮಗ್ರ ಅಭಿವೃದ್ಧಿಗಾಗಿ ಈ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ **ರೂ.34.61** ಕೋಟಿಗಳನ್ನು ಮೀಸಲಿರಿಸಿದೆ. ಹೊಸ ವಲಯಗಳಲ್ಲಿ ಮಳೆ ನೀರಿನ ಚರಂಡಿಗಳ ಪುನರ್ ನವೀಕರಣಕ್ಕಾಗಿ **ರೂ.10.00** ಕೋಟಿಗಳನ್ನು ಮೀಸಲಿರಿಸಿದೆ. ಮತ್ತು ಚಲ್ಲಘಟ್ಟ, ಹೆಬ್ಬಾಳ, ಕೋರಮಂಗಲ, ವೃಷಭಾವತಿ ಕಣಿವೆಗಳ ನವೀಕರಣಕ್ಕಾಗಿ **ರೂ.60.00** ಕೋಟಿಗಳನ್ನು ಮೀಸಲಿರಿಸಿದೆ.

ಬೃಹತ್ ಮಳೆ ನೀರುಗಾಲುವೆ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಒಟ್ಟಾರೆ **ರೂ.147.33 ಕೋಟಿ**ಗಳನ್ನು ಮೀಸಲಿಡಲಾಗಿದೆ.

## 14. ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳು:

ನಮ್ಮ ದೇಶದ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ರವರು ದೇಶದಾದ್ಯಂತ ದಿನಾಂಕ 2-10-2014 ರಂದು ಸ್ವಚ್ಛ ಭಾರತ ಅಂದೋಲನವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಪಾಲಿಕೆಯಲ್ಲಿ ನಿರಂತರವಾಗಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದ್ದು, ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ ಈ ಕೆಳಕಂಡ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

- ಘನತ್ಯಾಜ್ಯ ವಿಲೇವಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ತ್ಯಾಜ್ಯದಿಂದ ಗೊಬ್ಬರ ಹಾಗೂ ವಿದ್ಯುತ್ ಉತ್ಪಾದಿಸಲು ಮೆ॥ ಸತಾರೆಂ ಎಂಟರ್.ಪ್ರೈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.
- ಹಸಿತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸುವ 12 ಬಯೋಮಿಥನೈಜೇಷನ್ ಘಟಕಗಳನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.
- ಪ್ಲಾಸ್ಟಿಕ್ ತ್ಯಾಜ್ಯದಿಂದ ಕಚ್ಚಾ ತೈಲ ಉತ್ಪಾದಿಸಲು ಮೆ॥ ಎಂ.ಕೆ ಆರೋಮೇಟಿಕ್ಸ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಪ್ರಸಕ್ತ ಸಾಲಿನಲ್ಲಿ ಘಟಕವನ್ನು ಪ್ರಾರಂಭಿಸಲಾಗುವುದು.
- ಹೋಟೆಲ್ ತ್ಯಾಜ್ಯದಿಂದ ಗೊಬ್ಬರ ಹಾಗೂ ಬಯೋಗ್ಯಾಸ್ ತಯಾರಿಕೆಯ ಕಟ್ಟಡ ಈ ಸಾಲಿನಲ್ಲಿ ಘಟಕವನ್ನು ಪ್ರಾರಂಭಿಸಲಾಗುವುದು.
- ಪಾಲಿಕೆಯ ವ್ಯಾಪ್ತಿಯಲ್ಲಿ ಗುರುತಿಸಲ್ಪಟ್ಟಿರುವ 6500 ಚಿಂದಿ ಆಯುವವರಿಗೆ ಕೇಂದ್ರ ಸರ್ಕಾರದ "ಸಮರ್ಥ" ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲಾಗುವುದು.
- ಪಾಲಿಕೆಯ ಘನತ್ಯಾಜ್ಯ ಸಂಸ್ಕರಣೆ ಸಾಮರ್ಥ್ಯವನ್ನು ಬಲಪಡಿಸಲು 7 ಪ್ರದೇಶಗಳಲ್ಲಿ ಹೊಸ ಘಟಕಗಳನ್ನು ನಿರ್ಮಿಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಸ್ವಚ್ಛತೆ ಮತ್ತು ಕಸ ಸಾಗಾಣಿಕೆ ಹಾಗೂ ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಒಟ್ಟಾರೆ **ರೂ.415.00** ಕೋಟಿಗಳನ್ನು ಮೀಸಲಿರಿಸಿದೆ.

## 15. ಅಂತರ್ಜಾಲದಲ್ಲಿ ಪಾಲಿಕೆ ಬಜೆಟ್:

**2015–16ನೇ** ಸಾಲಿನ ಪಾಲಿಕೆಯ ಆಯವ್ಯಯವು ಘನ ರಾಜ್ಯ ಸರ್ಕಾರದಿಂದ ಅನುಮೋದನೆಗೊಂಡ ನಂತರ ಸಾರ್ವಜನಿಕರು ವೆಬ್‌ಸೈಟ್ ಮೂಲಕ ವೀಕ್ಷಿಸುವ ಸಲುವಾಗಿ ಅಂತರ್ಜಾಲದಲ್ಲಿ ಅಳವಡಿಸಲಾಗುವುದು.

## 16. ಪರಿಸಮಾಪ್ತಿ:

**ಆತ್ಮೀಯ** ಬಂಧುಗಳೇ, ನಗರದ ವಿವಿಧ ಇಲಾಖೆಗಳ ಮೂಲಕ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸ್ವೀಕೃತವಾಗುವ ಆದಾಯದಲ್ಲಿ ಶೇ.70ರಷ್ಟು ಆದಾಯ ಬೆಂಗಳೂರು ನಗರವು ನೀಡುತ್ತಿದೆ ಎಂಬುದು ಹೆಮ್ಮೆಯ ಸಂಗತಿಯಾದರೂ ಸಹ ರಾಜ್ಯ ಸರ್ಕಾರದಿಂದ ನಿರೀಕ್ಷಿತ ಅನುದಾನವು ಪಾಲಿಕೆಗೆ ಲಭ್ಯವಾಗುತ್ತಿಲ್ಲವಾದ ಕಾರಣ ಪಾಲಿಕೆಯು ಆರ್ಥಿಕವಾಗಿ ಸಂಕಷ್ಟ ಎದುರಿಸಬೇಕಾಗಿದೆ. ಹಾಗೂ ಬೆಂಗಳೂರು ನಗರದ ಅಭಿವೃದ್ಧಿಯನ್ನು ಸಹ ನಿರಂತರವಾಗಿ ಕಾಪಾಡಿಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಪ್ರಸ್ತುತ ಪಾಲಿಕೆಗೆ ಸ್ವೀಕೃತವಾಗುತ್ತಿರುವ ವರಮಾನಗಳು ಪಾಲಿಕೆಯ ದೈನಂದಿನ ನಿರ್ವಹಣೆಗೆ ಮಾತ್ರ ಸಾಧ್ಯವಾಗುತ್ತಿದ್ದು ಅಭಿವೃದ್ಧಿ

ಕಾಮಗಾರಿಗಳಿಗೆ ಸರ್ಕಾರದ ಅನುದಾನದ ಮೇಲೆ ಅವಲಂಭಿತವಾಗಬೇಕಾಗಿದೆ. ಆಸ್ತಿ ತೆರಿಗೆಯನ್ನು ಕಳೆದ 7 ವರ್ಷಗಳಿಂದ ಪರಿಷ್ಕರಿಸದೇ ಇರುವುದು ಸಹ ಪಾಲಿಕೆಯ ಆರ್ಥಿಕ ಮುಗ್ಗಟ್ಟಿಗೆ ಕಾರಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅನಾವಶ್ಯಕ ಕಾಮಗಾರಿ ವೆಚ್ಚಗಳನ್ನು ಸ್ಥಗಿತಗೊಳಿಸುವುದು ಹಾಗೂ ಆಡಳಿತಾತ್ಮಕ ವೆಚ್ಚಗಳಲ್ಲಿ ಮಿತವ್ಯಯ ಸಾಧಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿ ಅಗತ್ಯವಾದ ಕಾಮಗಾರಿಗಳು ಹಾಗೂ ನಿರ್ವಹಣೆ ಕಾಮಗಾರಿಗಳಿಗೆ ಮಾತ್ರ ಆದ್ಯತೆಯನ್ನು ನೀಡಲಾಗಿದೆ.

2015-16ನೇ ಸಾಲಿನ ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಾಸ್ತವಕ್ಕೆ ಹತ್ತಿರವಾದ ಆಯವ್ಯಯವನ್ನು ತಯಾರಿಸಲು ಸೂಚಿಸಿ ಸಹಕರಿಸಿದ **ಪೂಜ್ಯ ಮಹಾಪೌರರು, ಉಪ ಮಹಾಪೌರರಿಗೆ,** ಹಾಗೂ ಉತ್ತಮ ಸಲಹೆಗಳನ್ನು ನೀಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ **ಶ್ರೀ ರಾಮಲಿಂಗಾರೆಡ್ಡಿ ರವರಿಗೂ,** ಶಾಸಕರು ಹಾಗೂ ಮಾಜಿ ಉಪ ಮುಖ್ಯ ಮಂತ್ರಿಗಳಾದ **ಶ್ರೀ ಆರ್.ಅಶೋಕ್ ರವರಿಗೂ,** ಹೆಬ್ಬಾಳ ವಿಧಾನಸಭಾ ಕ್ಷೇತ್ರ ಶಾಸಕರಾದ **ಶ್ರೀ ಆರ್ ಜಗದೀಶ್ ಕುಮಾರ್** ರವರಿಗೂ ಮತ್ತು ಆಡಳಿತ ಪಕ್ಷದ ನಾಯಕರಾದ **ಶ್ರೀ ಎನ್.ಆರ್.ರಮೇಶ್** ಮತ್ತು ವಿರೋಧ ಪಕ್ಷದ ನಾಯಕರಾದ **ಶ್ರೀ ಬಿ.ಎನ್.ಮಂಜುನಾಥರೆಡ್ಡಿ.** ಜೆ.ಡಿ.ಎಸ್. ಪಕ್ಷದ ನಾಯಕರಾದ **ಶ್ರೀ ಆರ್.ಪ್ರಕಾಶ್** ರವರುಗಳಿಗೂ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯರು, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರು, ಪಾಲಿಕೆಯ ಸದಸ್ಯರುಗಳು ಹಾಗೂ ಆಯುಕ್ತರಾದ **ಶ್ರೀ ಎಂ.ಲಕ್ಷ್ಮೀನಾರಾಯಣ ಐ.ಎ.ಎಸ್.** ರವರಿಗೂ, ವಿಶೇಷ ಆಯುಕ್ತರುಗಳಿಗೂ, ಅಪರ ಆಯುಕ್ತರು (ಹಣಕಾಸು) ರವರಿಗೂ, ಹಣಕಾಸು ಮತ್ತು ಲೆಕ್ಕಪತ್ರ ಶಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೂ, ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೂ, ಮಾಧ್ಯಮ ಮಿತ್ರರಿಗೂ ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ, ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತಾ, **ನಾನು ಮಂಡಿಸಿರುವ 2015-16ನೇ ಸಾಲಿನ ಆಯವ್ಯಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯು ಅನುಮೋದಿಸಬೇಕೆಂದು ಕೋರಿ** ಈ ಆಯವ್ಯಯ ಭಾಷಣವನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಜೈ ಹಿಂದ್, ಜೈ ಕರ್ನಾಟಕ, ಜೈ ಬೆಂಗಳೂರು**

**"ಧನ್ಯವಾದಗಳು"**

BRUHAT BENGALURU MAHANAGARA PALIKE

# BUDGET – 2015-16

**DATE: 17-3-2015**

**Presented by**

V.ANAND
**Chairman, Taxation & Finance Committee,**
**Bruhat Bengaluru Mahanagara Palike.**

## CHAIRMAN & MEMBERS OF THE TAXATION AND FINANCE STANDING COMMITTEE

## FOR THE YEAR 2014-15

| | | |
|---|---|---|
| 1. | Sri. V.Anand | Chairman |
| 2. | Sri. K.Chandrashekar | Member |
| 3. | Sri. N.Nagaraju | Member |
| 4. | Sri. G.Manjunatharaju | Member |
| 5. | Sri.Siddalingaiah | Member |
| 6. | Sri.M.Muniraju | Member |
| 7. | Sri.G.Manjunatha | Member |
| 8. | Smt. Jyothisri Harireddy | Member |
| 9. | Smt. Gangambike | Member |
| 10. | Sri. S.Keshavamurthy | Member |
| 11. | Sri.M.B.Govindegowda | Member |

## BRUHAT BENGALURU MAHANAGARA PALIKE

## BUDGET PRESENTATION FOR THE YEAR 2015-16

**By**

V.ANAND

**CHAIRMAN, TAXATION AND FINANCE COMMITTEE, BBMP, BENGALURU**

I welcome One and All who are present in this Kempegowda Council Hall and I hereby request your permission to present the BBMP Budget for the year 2015-16

On this auspicious occasion of presenting the BBMP Budget for 2015-16. I believe that this is my primary duty to remember the history of this great Bengaluru city which has grown to this International Level.

The History of vibrant city of Bengaluru goes back to the year 1537 AD. What began with the construction of a mud fort and erection of 4 watch towers has not seen full stop even today. The city with such a humble beginning has grown into a sprawling metropolitan with an area of more than 800 sq. kms and with a population of more than one crore. The city has got recognition at both National and International level as the silicon city with major growth in the IT sector. The city has witnessed various technological developments of the world and at the same time has retained its grand cultural identity.

With the inclusion of 7 CMC and 1 TMC and 110 Villages to existing BMP became BBMP in 2007. The Administrative area has increased from 225 sq kms to more than 800 sq kms with a population of more than one crore.

After the formation of Bruhat Bengaluru Mahanagara Palike in 2007 and due to rapid growth of the city, BBMP has faced some Administrative and Financial Challenges in providing Basic Civic Amenities. This Challenge has to be faced with prompt, disciplined new measures. For this BBMP has to find new ways to improvise its revenue and financial assistance from Government of Karnataka is very much needed.

In such a tight and tough situation financial management is a core issue, in tackling this issue I appreciate the support given by Worshipful Mayor and Deputy Mayor and Hon'ble Chief Minister **Sri Siddharamaiah** Government of Karnataka and Bengaluru City In-charge Minister and Transport Minister **Sri.Ramalingareddy**, roles of respectful members of Legislative Assembly of Bangalore City Area, Hon'ble Members of Parliament of Bangalore City Area, Ruling Party Leader, Opposition Party leader and JDS Party leader and All Standing Committee Chairman's and fellow colleagues in the house.

I, personally thank Hon'ble Sri.Ananthkumar and Sri.Sadananda Gowda, Union Ministers, Government of India and Sri.P.C.Mohan Member of Parliament and Sri.R.Ashoka, MLA & Ex Deputy Chief Minister, Sri.B.N.Vijaya Kumar, MLA Jayanagar Assembly Constituency, Sri Jagadeesh Kumar, MLA Hebbala Assembly Constituency, and all others who guided me in preparing this Realistic Budget.

I congratulate all who extended their co-operation in making Bengaluru City a clean and Garbage free city.

I extend my gratitude to Hon'ble Chief Minister and Bengaluru City in charge Minister for the announcement of financial assistance to BBMP to overcome the present financial crisis through State Budget 2015-16.

Respected Commissioner, all the Senior Officers & Staff of BBMP, all representatives of Print & Television Media and all the citizens of Bangalore City.

By keeping in mind the actual source of income from different resources priority in taking up maintenance works in current year is most essential under present financial crisis. In this context prompt effort is made to cut down administrative expenses by giving priority to maintenance work in this budget. Certain essential developmental works have also been given priority to bring BBMP out of present financial crisis. Certain strict measures have been taken up in this budget.

## 2014-15 year's revised budget estimates

As per Budget estimates of 2014-15 total receipts stood at **Rs.5977.92 Cr** and total expenditure was proposed at **Rs.6024.52** And as per revised estimates total receipts were **Rs2894.13 Cr** and total Expenditure are **Rs2927.25 Cr.**

## 2015-16 year Budget estimates:

As per 2015-16 Budget Estimates, Opening Balance is **Rs17.17** Cr. Receipts is **Rs.6712.45** Cr. which amounts to **Rs.6729.62** Cr. Out of this **Rs.2000.25** Cr. are Tax receipts, **Rs.844.64** Cr. are Non-tax receipts. **Rs2902.29** Cr. is Government grants and **Rs.965.28 Cr.** is other income.

In the 2015-16 financial year total expenditure is proposed to **Rs.6728.98 Cr**. out of which Revenue Expenditure is proposed at **Rs.2243.22 Cr.** and Capital Expenditure is proposed at **Rs.4486.40 Cr.** Hence **Rs.64.00 Lakhs** surplus budget is expected.

## Present Financial Status of Palike:

In view of the present financial status of BBMP, the financial assistance from the State Government is highly desirable. We have already undertaken many major works at the cost of BBMP and State Government grants. In order to fulfill the aspirations of the citizens of Bangalore City, we request the State Government to release the balance grants of 2014-15 and fresh grants for the current year which amounts Rs.5480.47 Cr.

## Administrative Measures:

- In order to bring in e- Governance in BBMP various measures have been taken.
- Finance and Accounts department existing IFMS has been upgraded and all financial transactions are made through online system.
- Professional Management Training to all Officers/Staff has been promoted at various levels and it will be continued.
- All measures will be taken up in effective manner to cut the unnecessary administrative expenses.
- The appointment 4000 Poura karmikas has been kick started by calling applications from eligible candidates and recruitment process is under progress.
- The Legal Cell of BBMP has been working effectively advocating in court and brings back the palike properties to BBMP fold.

### During 2015-16 expected Revenues:

## 1. Revenue Department:

As the property tax collection is the main source of Income in BBMP. Some important measures have been taken to improve the collection of property tax.

- Geographical Information system (GIS) has been utilized to identify the properties and bring them under tax net. Nearly 85% of the properties have been provided with PID numbers and remaining properties will be awarded with PID numbers during the year.
- All efforts have been made to collect the Service Taxes from Central and State Government buildings.
- All efforts have been made to identify the un authorized PGs which are running in Bangalore city area and bring them to tax net and strict measures will be taken for collecting Property Tax.
- Strict measures have been made to collect the Betterment charges in areas where the land has been converted to residential purpose.

By affecting the above measures in revenue department, we are expecting a tax collection of Rs.2000.00 Cr as property tax, Rs.480.00 Cr as Cess and Rs.15.00 Cr as betterment charges and at around total of Rs.2636.70 cores is expected in the current financial year.

**2. Market:** The collection of rent from BBMP shops and Complexes is also one of the sources of BBMP revenue. Under the Chairmanship of Market Standing Committee the rents of these shops and shopping complex have been verified and revised. In this context a revenue of Rs.75.00 Crore is expected during the year.

**3. Advertisement Tax:** As per the KMC Act Advertisement Tax is also a part of revenue for BBMP. But BBMP failed in collecting the expected revenue from this source. Hon'ble High Court and Lokayuktha have criticized heavily on this point. In this context a proposal has been sent to GOK for banning the advertisement hoarding in the city and also for maintaining the beauty of the city by making the city has Advertisement free. An effort will be made to increase the BBMP Own revenue by re allocating the staff working Advertisement Depart to Revenue Department.

**4. Optical Fiber Cable (OFC):** As per the existing OFC policy all efforts are made to discuss and execute an MOU with telecom companies and service providers and to collect the OFC rent of Rs.300.00 Cr. and overall Rs.333.00 Cr. is expected in the current financial year.

**5. SWM Cess:** BBMP is collecting SWM cess along with property tax of residential and non-residential properties in BBMP limits; it is expected to collect an amount of Rs.30.00 Crores during the year.

**6. Trade License:** Approximately Four lakh commercial establishments are existing in BBMP limits. It is expected to collect Rs.8.12 Cr. through Trade license fee during the current year.

**7. Town Planning:** It is expected to collect Rs.237.50 Cr. through Fees & Fines in town planning department.

## 8. Government Grants:

Government of Karnataka has announced Grant for BBMP in its budget 2015-16 as Under Mukhya Manthrigala Nagarothana Yogane Rs.1000.00 Cr. SFC & 14th Finance Commission, Rs.391.06 Cr. and Additional Grants of Rs.1500.00 Cr.A total of Rs.2891.06 Cr. is expected. An amount of Rs.11.00 Cr. is expected from GOI Grants.

## Budget - Proposed Programmes and Developmental Works during 2015-16

**By keeping in view the present financial crisis in BBMP. the priority is given to Welfare, Health, Education, SWM, Electrical, Horticulture, maintenance of forest, Repairs and Maintenance in this budget and Presently ongoing works and spill over works in zonal levels, project, SWD, RRI and certain projects taken up under Government grants all prompt efforts are made to complete all the above works. Hence only those new works which are more essential will be taken up.**

## 1. Welfare Programmes:

BBMP has taken up under 24.10% Welfare programmes are undertaken every year for the benefit of SC/ST, backward, minority communities and women. Construction of individual houses, training for professional courses, sports activities, self employment, community facilities, and self employment and likewise a will also be continued in the present financial year. Under welfare programmes for backward class and minorities like construction of Individual houses for higher education welfare programmes for handicapped and women will also be continued in the present financial year.

A sum of **Rs.401.00** Cr. have been earmarked for the above said welfare programmes.

## 2. Cultural and Sports Programmes:

The works for upgrading **Kitturu Rani Chennamma Stadium** to the international standard in Byrasandra ward in Jayanagara is in finishing Stage and it will be inaugurated during First Week of April 2015.

As announced in the earlier budget, many playgrounds under BBMP limits have been developed under the slogan "**Marali Ba Aatadha Mydhanakke"**

## 3. +Health Programmes:

- Rs.5.00 Crores is reserve for the implementation of National Urban Health Mission **project with help of Government of India**
- Advanced services will be provided in BBMP Dispensaries, maternity Hospitals and 6 Referral hospitals, and Free Ultra Sound Scanning services will be continued in all the maternity and referral hospitals of BBMP.
- An amount of **Rs.105.08** Cr. is set aside for the Health Department.

## 4. Education:

- Rs. 1.00 Cr. is allocated for providing CC TV cameras in all BBMP Schools and Colleges. Special importance is given to Girls Schools and colleges.
- .Rs. 25.00 lakhs is allocated for providing financial assistance to top scoring students of SSLC and 2$^{nd}$ PUC and financial benefits to disabled and AIDS affected students studying in BBMP and Government Schools under GNANA DEEPA Scheme for improving the quality of coaching
- Rs. 2.00 Cr. is earmarked for providing free mid day meal to students studying in BBMP schools.
- Special Training and coaching for preparing the students of BBMP schools/colleges for competitive exams will be continued.
  A total amount of **Rs.20.66** Cr. is set aside for Education purpose.

## 5. Horticulture:

It is an important objective of BBMP in naming the city of Bangalore as "Garden City". Importance is given to develop and maintain parks in all wards. Presently a total of 1237 parks are Developed and Maintained by BBMP By keeping in mind existing Financial crisis, priorities is given for maintaining the existing parks and completion of ongoing works in Horticulture department an amount of **Rs.76.56 Cr.** is set aside for the said purpose.

## 6. A forestation:

Forest wing of BBMP through its continued efforts to maintain the Green Heritage of the city is planting saplings on road sides, cutting the branches of big trees through canopy maintenance and providing tree guards for conserving the environment of the city. It has become an integral part of BBMPs action plan to plant more and more saplings to make the city greener since more trees are being cut for developmental works like Metro Rail Project, Road Widening and due to the raise in the Concrete Structures. As per the guidelines of the Hon High Court. Due to the increase in the vehicular population and also due to raise in Global Warming, Aforestation has become an important issue to bring down the temperature and also to reduce the pollution level in the atmosphere. A forestation has to be taken on Priority basis. BBMP has earmarked Rs.41.52 Cr for this purpose during the current year.

## 7. Rain Water Harvesting:

Rain Water harvesting schemes is most populist scheme. We have noticed the increase of ground water level in BBMP areas due to implementation of RWH. In order to further improvise the ground water level effectively. RWH is made compulsory Government and BBMP buildings, parks, public buildings.

## 8. Lakes development:

At present there are around 82 lakes in BBMP control & all these lakes area being developed in staged manner. Out of this 46 lakes have already been developed completely and rain water is stored in these lakes. Pathways made in the periphery of the lakes area used by the general public of walking. In addition to this 11 more lakes have been handed over to local Resident Welfare Associations on annual maintenance basis. An amount of Rs.130.00 Cr. earmarked in the current financial year with the Government grants for development and maintenance and ongoing projects.

## 9. Estates

Out of the 5109 identified BBMP properties, process of assigning PID NO's have been started and approximately 4708 properties have been assigned with PID and the remaining Properties will be assigned with PID No's for the current financial year. As per the direction of Hon'ble High Court all necessary action has been taken to indexing and scanning of records of BBMP properties under Integrated Asset Management System. An amount of **Rs.40.40** Crore has been earmarked for Land acquisition for Road widening, SWM and fencing of BBMP properties.

## 10. Markets:

Former Mayor took special interest in cleaning up of SKR Market by creating awareness and also by involving students of different educational institutions for cleaning up the market and making it a Model market. Rs.20.00 Cr.has been reserved for Rejuvenation of improvements of BBMP Commercial complexes and Maintenance of BBMP Market and Construction of Multi level Car parking at Malleshwaram.

## 11. Zonal Engineering Woks:

BBMP will take up works on priority for taking up roads works effectively for free flow of traffic. Pot hole filling, Maintenance of roads, and providing drinking water in BBMP Limits will be given priority.

## 12. Infrastructure Works:

The Government of Karnataka in its Budget 2015-16 has announced Rs.1000.00 Cr. under Mukhya Manthrigala Nagarothana for Basic road infrastructure projects, Road widening projects, Lakes development and improvement and development of backward area in 7 CMC and 1 TMC areas of BBMP. Also an additional Grant of Rs.1500.00 Cr. has been announced in its Budget.

- Action will be taken depending on the release of grants from Government.
- It is proposed to Maintain and repair the existing major projects and also to construct new projects like Junction, Grade Separator, Palike Bazaar at Vijayanagar, Multilevel Car Parking Under Nagarothana Grants and BBMP's own resources.

## 13. Storm Water Drain:

Under Government of India Grants Rs.34.61 Crores for ongoing works and Rs.10.00 Cr. is reserved for renovation of SWD in New Zones, Rs.60.00 Crores is reserved for renovation of Challaghatta, Hebbal, Koramangala and Vrishabavathi Vallyes. Total Rs.147.33 Crores has been reserved for all SWD related works.

## 14. Solid Waste Management:

**Our beloved Prime Minister Sri.Narendra Modhi, has announced SWACHHA BHARAT on 2-10-2014 as National Cleanly ness Programme all over India. The same has been effectively implement in BBMP. Following steps have been taken up under Solid Waste Management:**

- An MOU has been signed with M/s Satharam Enterprises for effective disposal of Solid Waste and Segregation of Dry Waste and West Waste and for production of current and manure.
- In current financial year setting up of 12 Bio-methanisation units for producing bio-gas from wet waste will be completed.
- An MOU has been signed with M/s M.K.Aromatics Company for manufacture of crude oil from plastic waste.
- Proposal is made for establishing units to produce bio-gas and Manure from wet waste collected from Hotel & Restaurants.
- Under Central Government SAMARTH Scheme 650 rag picker also are identified in BBMP Limits for providing various facilities
- In order to strengthen the segregation and disposal of Solid Waste, . Construction of new segregation centers in 7 places will be completed in the current financial year.

BBMP has earmarked **Rs.415.00 Cr for SWM related works in the Current financial year.**

## 15. Budget on the Internet:

2015-16 Budget will be displayed on BBMP website for public viewing after approval from the government of Karnataka.

## 16. Conclusion:

Dear friends, even though Bengaluru contributes more than 70% of States Revenue from all the departments but still BBMP lacks proportionate financial assistance from the state government and as a result, we are facing severe financial crunch and hence we are finding it tough for better development of Bengaluru City. At present the BBMP's own resources are sufficient only for day to day maintenance of BBMP. Hence we are depending on GOK grants for taking up more developmental projects. Revision of property tax under SAS scheme is not effected even after 7 years and as a result it is also one of the reasons for the BBMP financial crunch. On this pressure we are forced to stop unnecessary expenditure and to cut and minimize Administrative expenses. Hence in this Budget we have concentrated only on most essential works and maintenance works only.


I express my sincere thanks and heartfelt gratitude to Worshipful Mayor and Deputy Mayor for their kind co-operation in presenting the most realistic Budget for 2015-16 keeping in mind the present financial crisis of BBMP.I also thank Sri.Ramalingareddy, Bangalore In-charge Minister, Sri.R.Ashok Former Dy Chief Minister and MLA, Sri.R.Jagadish Kumar MLA Hebbal Constitutency, Sri.N.R.Ramesh, Ruling party Leader BBMP Council, Sri.B.N.Manjunatha Reddy Opposition leader, Sri.R.Prakash JDS Party leader and all the members of T & F Standing Committee, Chairman's of all the Standing Committee, all the Corporators for their guidance, and I also thank our Commissioner Sri.M.Lakshminarayana IAS, the Special Commissioner (Project), Additional Commissioner (Finance), All the Officers and Staff of the CAO Office, All the friends from Print and TV Media, I also thank all those who helped me directly or indirectly in preparing this budget.

I conclude my speech by requesting the BBMP Council to approve the budget for 2015-16 which I have presented today.

***Jai Hind, Jai Karnataka, Jai Bengaluru.***

**Thanks to one and all.**

# Receipts – 2015-16




# Payments – 2015-16

